ಶ್ರೀ ಎಂ. ಚಂನ್ರಶೇಖರ್ (ಶಿಕ್ಷಣ ಮಂತ್ರಿಗಳು).

ಆ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ವಸಂತ ವಿ. ಸಾಲಿಯಾನ. — ಅಧ್ಯಕ್ಷರೆ, ನನ್ನ ಮೊದಲನೆಯ ಪ್ರಶ್ನೆಗೆ ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಇಲ್ಲ ಎಂದು ಹೇಳಿದ್ದಾರೆ. ನಾನು ಕೇಳಿತಕ್ಕಂಥಾದ್ದು ಇಷ್ಟೆ, ಕಾಪು ಕ್ಷೇತ್ರದ ಪೊಲಿಪು ಸರ್ಕಾರಿ ಜೂನಿಯರ್ ಕಾಲೇಜನ್ನು ಪೂರ್ಣ ಪ್ರಮಾಣ ಕಾಲೇಜು ಮಾಡಲಿಕ್ಕೆ ಸಾರ್ವಜನಿಕರಿಂದ ಮನವಿ ಬಂದಿದೆಯೇ? ಇನ್ನು ಎರಡನೆಯದಾಗಿ ಕೇಳಬೇಕೆಂದರೆ ಈ ವಿಚಾರದಲ್ಲಿ ಅಧಿಕಾರಿಗಳು ಯಾವ ಮಟ್ಟದವರೆಗೆ ಪರಿಶೀಲನೆ ನಡೆಸಿದ್ದಾರೆಂದು ತಿಳಿಸಬೇಕು.

ಶ್ರೀ ಎಂ. ಚಂದ್ರಶೇಖರ್.— ಅಧ್ಯಕ್ಷರೆ: ಮಾನ್ಯ ಸದಸ್ಯರ ಪ್ರಶ್ನೆ ಏನೆಂದರೆ ಕಿರಿಯ ಕಾಲೇಜು ಏನಿದೆ ಅದನ್ನು ಪ್ರಥಮ ದರ್ಜೆ ಕಾಲೇಜು ಮಾಡಬೇಕೆಂದು ಹೇಳುತ್ತಿದ್ದಾರೆ. ಇವೊತ್ತು ಸರ್ಕಾರದ ನೀತಿ ಏನೆಂದರೆ. ರಾಜ್ಯದಲ್ಲಿ ಪ್ರಥಮ ದರ್ಜೆ ಕಾಲೇಜುಗಳು ಈಗ ಇರುವ ಸಂಖ್ಯೆಗಿಂತಲೂ ಹೆಚ್ಚು ಮಾಡುವ ಅಗತ್ಯ ಇದೆಯೇ ಎನ್ನುವುದು ಮೊದಲನೆಯದು. ಈಗ ಸರ್ಕಾರ ಕಾಲೇಜಿಗೆ ಮಂಜೂರಾತಿ ಮಾಡಬೇಕಾದರೆ ಹಣದ ವ್ಯವಸ್ಥೆ ನೋಡಿಕೊಂಡು ಮಾಡಬೇಕಾಗುತ್ತದೆ. ಆ ಭಾಗದ ಸುತ್ತಮುತ್ತ ಯಾವುದೂ ಕಾಲೇಜುಗಳು ಇಲ್ಲವೇ ಹೇಗೆ ಎನ್ನುವುದನ್ನು ತನಿಖೆ ಮಾಡಬೇಕಾಗುತ್ತದೆ. ಇದರ ಬಗ್ಗೆ ಮುಂದಿನ ವರ್ಷ ನೋಡಬಹುದು.

ಶ್ರೀ ವಸಂತ ವಿ. ಸಾಲಿಯಾನ.— ಈ ವಿಚಾರದಲ್ಲಿ ೧೯೮೫ರಿಂದಲೂ ಸಾರ್ವಜನಿಕರಿಂದ ಬೇಡಿಕೆ ಬಂದಿದೆ. ೧೯೮೫ರಲ್ಲಿ ಮಂಗಳೂರು ಉಪ ನಿರ್ದೇಶಕರು ಬಂದು ಪರಿಶೀಲನೆ ನಡೆಸಿ ವರದಿಯನ್ನು ಸರ್ಕಾರದ ಮುಂದೆ ಇಟ್ಟಿದ್ದರು. ೧೯೮೬ರಲ್ಲಿ ಪುನಃ ಅಧಿಕಾರಿಗಳು ಬಂದು ಸಾರ್ವಜನಿಕರು ಮತ್ತು ಪೆಟರ್‌ಮೆಂಟ್ ಕಮಿಟಿ ಮಿಟಿಂಗ್ ಕರೆದು ಪರಿಶೀಲನೆ ಮಾಡಿ ಸರ್ಕಾರಕ್ಕೆ ವರದಿಯನ್ನು ಕೊಟ್ಟಿದ್ದಾರೆ. ಈಗ ಮಾನ್ಯ ಮಂತ್ರಿಗಳು ಸರ್ಕಾರದ ಗಮನಕ್ಕೆ ಬರಲಿಲ್ಲ ಎಂದು ಹೇಳುತ್ತಾರೆ. ಈ ಸದನದಲ್ಲಿ ತಪ್ಪು ಮಾಹಿತಿ ಕೊಡುತ್ತಿದ್ದಾರೆ. ಇದರ ಬಗ್ಗೆ ೧೯೮೫ರಿಂದ ೧೯೮೮ರವರೆಗೆ ಪರಿಶೀಲನೆ ನಡೆದಿದೆ. ಮಾನ್ಯ ಮಂತ್ರಿಗಳಿಗೆ ಗೊತ್ತಿಲ್ಲದೇ ಇದ್ದರೆ ಸರ್ಕಾರದ ಅಧಿಕಾರಿಗಳ ಜೊತೆ ಚರ್ಚೆ ಮಾಡಿ ತಿಳಿದುಕೊಳ್ಳಬಹುದು. ಕರಾವಳಿ ಪ್ರದೇಶಕ್ಕೆ ಕಾಲೇಜು ಕೊಡಬೇಕೆಂದು ಬಹಳ ಸಾರಿ ಹೇಳಿದ್ದು, ಹಲವಾರು ಬಾರಿ ಮನವಿಗಳನ್ನು ಕೊಡಲಾಗಿದೆ. ಆ ಪ್ರದೇಶದ ವಿದ್ಯಾರ್ಥಿಗಳು ಬಹಳ ದೂರ ಹೋಗಬೇಕಾಗಿರುವುದರಿಂದ ಕಾಲೇಜಿನ ಅವಶ್ಯಕತೆ ಬಹಳ ಇದೆ. ಆದ್ದರಿಂದ, ಕರಾವಳಿ ಪ್ರದೇಶಕ್ಕೆ ಒಂದು ಕಾಲೇಜು ಮಂಜೂರು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಚಂದ್ರಶೇಖರ್.— ಮಾನ್ಯ ಅಧ್ಯಕ್ಷರೆ. ನಾನು ಈಗಾಗಲೇ ಹೇಳಿದ್ದೇನೆ. ನಮ್ಮ ರಾಜ್ಯದಲ್ಲಿರತಕ್ಕ ಪ್ರಥಮ ದರ್ಜೆ ಕಾಲೇಜುಗಳ ಸಂಖ್ಯೆಗೂ ಮತ್ತು ವಿದ್ಯಾರ್ಥಿಗಳ ಸಂಖ್ಯೆಗೂ ಹೋಲಿಕೆಯನ್ನು ಮಾಡಿದರೆ ಬೇರೆ ಯಾವ ರಾಜ್ಯದಲ್ಲೂ ಇಲ್ಲದೇ ಇರುವಷ್ಟು ಸಂಖ್ಯೆಯಲ್ಲಿ ಪ್ರಥಮ ದರ್ಜೆ ಕಾಲೇಜುಗಳು ಖಾಸಗಿ ಮತ್ತು ಸರ್ಕಾರಿ ಕ್ಷೇತ್ರಗಳಲ್ಲಿವೆ. ಇನ್ನೂ ಹೆಚ್ಚಿನ ಕಾಲೇಜುಗಳ ಅವಶ್ಯಕತೆ ನಮ್ಮ ರಾಜ್ಯದಲ್ಲಿದೆಯೇ ಅಥವಾ ಇಲ್ಲವೆ ಎಂಬುದನ್ನು ನಾವು ಪರಿಶೀಲಿಸಬೇಕಾಗುತ್ತದೆ. ಅವಶ್ಯಕತೆ ಇದೆಯೆಂದು ಕಂಡುಬಂದರೆ ನಮ್ಮ ಆರ್ಥಿಕ ಪರಿಸ್ಥಿತಿಯನ್ನು ನೋಡಿಕೊಂಡು ಈ ವಿಷಯವನ್ನು ಪರಿಶೀಲಿಸುತ್ತೇವೆಂದು ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ.

ಗೋಕಾಕ್ ಸಮಿತಿ ವರದಿಯನ್ನು ಜಾರಿಗೊಳಿಸುವುದು

೩೬೮. ಶ್ರೀ ಮಹಮ್ಮದ್ ಲೈಕುದ್ದಿನ್ (ಬೀದರ್).— ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಗೋಕಾಕ್ ಸಮಿತಿಯ ವರದಿಯ ಆಧಾರದ ಮೇಲೆ ಕನ್ನಡವನ್ನು ಏಕೈಕ ಭಾಷೆ ಎಂದು ಸರ್ಕಾರವು ೧೯೮೬ನೇ ಸಾಲಿನಲ್ಲಿ ಹೊರಡಿಸಿರುವ ಆದೇಶ ಹಾಗೂ ತದ ನಂತರದ ಆದೇಶಗಳನ್ನು ರಾಜ್ಯದ ಉಚ್ಚ ನ್ಯಾಯಾಲಯವು ತಡೆ ಹಿಡಿದು ಆದೇಶ ಹೊರಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ದಿನಾಂಕ ೨೫-೨-೮೮ರಂದು ರಾಜ್ಯದ ಉಚ್ಚ ನ್ಯಾಯಾಲಯವು ನೀಡಿದ ತೀರ್ಪಿನ ಆಧಾರದ ಮೇಲೆ ಸರ್ಕಾರವು ಹೊಸ ಆದೇಶಗಳನ್ನೇನಾದರೂ ಹೊರಡಿಸಿದೆಯೇ?

ಇ) ಹಾಗಿಲ್ಲದಿದ್ದಲ್ಲಿ ಸರ್ಕಾರ ಯಾವಾಗಿನಿಂದ ಈ ಸಂಬಂಧವಾಗಿ ಆದೇಶಗಳನ್ನು ಹೊರಡಿಸುತ್ತದೆ.

ಶ್ರೀ ಎಂ. ಚಂದ್ರಶೇಖರ್ (ಶಿಕ್ಷಣ ಮಂತ್ರಿಗಳು) —

ಅ) ಬಂದಿದೆ.

ಆ) ಸರ್ವೋಚ್ಚ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಲು ತೀರ್ಮಾನ ತೆಗೆದುಕೊಂಡಿದೆ

ಇ) ಮೇಲಿನ ಉತ್ತರದಿಂದ ಈ ಪ್ರಶ್ನೆಗೆ ಉತ್ತರ ಉದ್ಭವಿಸುವುದಿಲ್ಲ.

SRI MOHAMED LAIQUDDIN — Mr. Speaker, Sir, the High Court of Karnataka after considering all the difficulties and aspects of the minority languages Urdu has been upheld and the Government has issued orders for the implementation of the Gokak Report, Those Orders have been held ultra vires on the ground that there will not be equal opportunity and equal protection of rights which have been guaranteed under the Constitution of India. So, why Government is intending to impose by force a language to the Urdu and other linguistic minorities? That is one question. TheGovernment has taken a decision to introduce from first standard which will be burdensome to the Urdu and other lingustic students. So, it is ultra vires the constitutional rights given by our Constitutional makers that every student gets his right to have his ownlanguage and that right is being denied to the minority by introducing Kannada language from first standard. We are not against Kannada language.

One more thing is that in High Schools 150 marks are being assigned to Kannada while for mother tongue it is only 100 which is also discriminatory. With all this why the State Government has decided to go in appeal to the Supreme Court against the order of the Karnataka High Court Is it not anti-minority?

ಶ್ರೀ ಎಂ. ಚಂದ್ರಶೇಖರ್.—ಹಿಂದೆ ಗೋಕಾಕ್ ವರದಿ ಅದಾಗ ನಮ್ಮ ರಾಜ್ಯದಲ್ಲಿ ಕನ್ನಡ ಭಾಷೆಯು ಆಡಳಿತದಲ್ಲಿ ಮತ್ತು ಶಿಕ್ಷಣದಲ್ಲಿ ಬಹಳ ವ್ಯಾಪಕವಾಗಿ ಬಳಕೆ ಆಗಬೇಕೆಂಬ ತೀರ್ಮಾನವನ್ನು ತೆಗೆದುಕೊಂಡು ಅದರ ಪ್ರಕಾರ ಸರ್ಕಾರಿ ಆಜ್ಞೆಯನ್ನು ಹೊರಡಿಸಲಾಯಿತು. ಇದಕ್ಕೆ ಸಂಬಂಧಪಟ್ಟಂತೆ ಉಚ್ಚ ನ್ಯಾಯಾಲಯದಲ್ಲಿ ಸಿ ಜನ ನ್ಯಾಯಾಧೀಶರ ನೇತೃತ್ವದಲ್ಲಿ ತೀರ್ಪು ಆಗುವಾಗ ಈ ಸಿ ಜನರ ಪೈಕಿ ಇಬ್ಬರು ನ್ಯಾಯಾಧೀಶರು ಈ ತೀರ್ಮಾನ ಸರಿಯಲ್ಲವೆಂದೂ, ಇದನ್ನು ಪುನರ್‌ಪರಿಶೀಲನೆ ಮಾಡಬೇಕೆಂದೂ ಹೇಳಿದ್ದಾರೆ ಇನ್ನೊಬ್ಬ ನ್ಯಾಯಾಧೀಶರು ಈ ತೀರ್ಮಾನ ಸರಿಯೆಂದು ತಮ್ಮ ಅಭಿಪ್ರಾಯವನ್ನು ಕೊಟ್ಟಿದ್ದಾರೆ ಈ ಬಗ್ಗೆ ನಮ್ಮ ಉದ್ದೇಶ ಏನು ಎಂಬುದನ್ನು ವಿಷದ ಪಡಿಸಿ ಸರ್ವೋಚ್ಚ ನ್ಯಾಯಾಲಯಕ್ಕೆ ಮನವಿಯನ್ನು ಸಲ್ಲಿಸಿದ್ದೇವೆ. ಅಲ್ಲಿ ಯಾವ ರೀತಿ ತೀರ್ಮಾನವಾಗುತ್ತದೋ ಅದನ್ನು ನೋಡಿಕೊಂಡು ಮುಂದೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ನಾವು ತೆಗೆದುಕೊಳ್ಳುತ್ತೇವೆ.

SRI MOHAMED LAIQUDDIN.—Sir, at High School level if 150 marks are given will it not be disadvantageous to linguistic minorities who are appearing for the mother tongue paper which is 100. They cannot compete with candidates whose mother tongue is Kannada Would it not be ultra vires the Constitutional provisions ?

ಶ್ರೀ ಎಂ ಚಂದ್ರಶೇಖರ್ —ಈ ವಿಚಾರ ಸರ್ವೋಚ್ಚ ನ್ಯಾಯಾಲಯದಲ್ಲಿ ಇರುವುದರಿಂದ ಇಲ್ಲಿ ಇದರ ಬಗ್ಗೆ ಹೆಚ್ಚಿನ ಚರ್ಚೆ ಮಾಡುವುದು ಅಗತ್ಯವಿಲ್ಲ. ಅಲ್ಲಿ ಏನು ತೀರ್ಮಾನವಾಗುತ್ತದೋ ಅದನ್ನು ನೋಡಿಕೊಂಡು ಎಲ್ಲರಿಗೂ ಅನುಕೂಲ ಆಗುವಂಥ ರೀತಿಯಲ್ಲಿ ಒಂದು ತೀರ್ಮಾನವನ್ನು ತೆಗೆದುಕೊಳ್ಳೋಣ.

(ಮಾನ್ಯ ಧರ್ಮಸಿಂಗ್ ಅವರು ಮಾತನಾಡಲು ಎದ್ದುನಿಲ್ಲಂವರು)

ಅಧ್ಯಕ್ಷರು.—ಮಾನ್ಯ ಧರ್ಮಸಿಂಗ್‌ರವರೇ ಇನ್ನೂ ೧೦–೧೨ ಪ್ರಶ್ನೆಗಳಿವೆ. ಆದ್ದರಿಂದ ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಧರ್ಮಸಿಂಗ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಲೈಕುದ್ದೀನ್‌ರವರು ಸರ್ಕಾರದ ನೀತಿಯ ಬಗ್ಗೆ ಕೇಳುತ್ತಿದ್ದಾರೆ. ಆದರೆ ಅವರು ಮೈನಾರಿಟಿ ಆಟಿಟ್ಯೂಡ್ ಬಗ್ಗೆ ಕೇಳುತ್ತಿದ್ದಾರೆ.

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ಸದಸ್ಯರಾದ ಧರ್ಮಸಿಂಗ್‌ರವರೇ ಮಂತ್ರಿಗಳಾಗಿದ್ದಾಗ ಇದನ್ನು ಮಾಡಿರುವುದಂ

ಶ್ರೀ ಧರ್ಮಸಿಂಗ್.—ಮಾನ್ಯ ಗೋಕಾಕ್ ವರದಿಯ ಬಗ್ಗೆ ಹೇಳುತ್ತಿಲ್ಲ. ಕನ್ನಡ ಭಾಷೆಯ ಬಗ್ಗೆ ಏನು ಹೇಳಂತಿಲ್ಲ. ಪೈಕೋರ್ಟ್ ತೀರ್ಪು ಏನು ಇದೆ ಅದರ ಬಗ್ಗೆ ಇದರಲ್ಲಿ ಹೇಳಿದ್ದಾರೆ. ಸುಪ್ರೀಮ್ ಕೋರ್ಟಿಗೆ ಹೋಗಲಿಕ್ಕೆ ಏನು ಇದೆ?

ಶ್ರೀ ಎಂ. ಚಂದ್ರಶೇಖರ್.—ಇಬ್ಬರು ಇದರ ವಿರುದ್ಧವಾಗಿದ್ದರೆ ಒಬ್ಬರು ಪರವಾಗಿ ಹೇಳಿದ್ದಾರೆ. ಅದರ ಬಗ್ಗೆ ತೀರ್ಮಾನವಾಗಬೇಕಾಗಿದೆ.

ಶ್ರೀ ಧರ್ಮಸಿಂಗ್.—ಇದನ್ನು ಅರ್ಧಗಂಟೆ ಚರ್ಚೆಗೆ ಇಟ್ಟರೆ ಒಳ್ಳೆಯದೆಂದೂ ನಾನು ಹೇಳುತ್ತೇನೆ.

ಶ್ರೀ ಚಂದ್ರಶೇಖರ್.—ಶಿಕ್ಷಣ ಕ್ರಮ ಭಾಷಾವಿಜ್ಞಾನವಾಗಿರುವುದರಿಂದ ಈ ಸಮಯದಲ್ಲಿ ಅದನ್ನು ಚರ್ಚೆ ಮಾಡುವುದು ಸೂಕ್ತವಲ್ಲವೆಂದು ಹೇಳುತ್ತೇನೆ.

ಶ್ರೀ ಧರ್ಮಸಿಂಗ್.—ಮಾನ್ಯ ಸದಸ್ಯರಾದ ಲೈಕುದ್ದೀನ್ ಅವರ ಪ್ರಶ್ನೆಗೆ ಉತ್ತರ ಕೊಟ್ಟಿರುವುದು ಸರಿಯಾಗಿಲ್ಲ.

ಶ್ರೀ ಹಿಂಡಸಗೇರಿ ಅಬ್ದುಲ್ ಹಕೀಮ್ ಮಹಮದ್ ಗೌಸ್.—ಕನ್ನಡ ಕಲಿಕೆಗ ಯಾರೂ ವಿರೋಧ ಮಾಡುತ್ತಿಲ್ಲ. ಈಗ ಕನ್ನಡವನ್ನು ಕಲಿಸತಕ್ಕಂಥ ಉಪಾಧ್ಯಾಯರುಗಳ ನೇಮಕವನ್ನೇ ಮಾಡುತ್ತಿಲ್ಲ.

ಶ್ರೀ ಧರ್ಮಸಿಂಗ್.—ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ಬಹಳವಾಗಿ ಚರ್ಚೆ ಮಾಡಬೇಕಾಗಿರುವುದರಿಂದ, ಅರ್ಧಗಂಟೆ ಚರ್ಚೆಗೆ ಅವಕಾಶವನ್ನು ಕೊಡಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು.—ಅರ್ಧಗಂಟೆಯ ಚರ್ಚೆಯಾಗಿ ಈ ಪ್ರಶ್ನೆಯನ್ನು ತೆಗೆದುಕೊಳ್ಳೋಣ.

ಮದ್ದೂರು ತಾಲ್ಲೂಕಿನ ಕೆಲವು ಗ್ರಾಮಗಳಲ್ಲಿ ಹಂಳುಗಳ ಹಾವಳಿಯಿಂದ ಬೆಳಗಳ ನಾಶ

೫೫೭. ಶ್ರೀ ಜಿ. ಮಾದೇಗೌಡ (ಕರುಗಾವಲು).—ಮಾನ್ಯ ವ್ಯವಸಾಯ ಮತ್ತು ಕೃಷಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮದ್ದೂರು ತಾಲ್ಲೂಕಿನ ಕೆಲವು ಗ್ರಾಮಗಳಲ್ಲಿ ಒಂದು ಜಾತಿಯ ಹಂಳುಗಳ ಹಾವಳಿಯಿಂದ ಬೆಳೆಗಳು ಸಂಪೂರ್ಣವಾಗಿ ನಾಶವಾಗಿ ರೈತರು ತೊಂದರೆಗೊಳಗಾಗಿರುವ ವಿಚಾರ ಸರಕಾರದ ಗಮನಕ್ಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರಕಾರ ಕೈಗೊಂಡಿರುವ ಕ್ರಮಂಗಳೇನು?

ಶ್ರೀ ಬಿ. ರಾಚಯ್ಯ (ವ್ಯವಸಾಯ ಮತ್ತು ಅರಣ್ಯ ಸಚಿವರು).—

ಅ) ಹೌದು. ಕೆಲವು ಹಳ್ಳಿಗಳಲ್ಲಿ ಸ್ವಲ್ಪಮಟ್ಟಿಗೆ ಬೆಳೆ ಹಾನಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಈ ಕೀಟವನ್ನು "ಹುಚ್ಚು ಇರುವೆ" (ಕ್ರೇಜಿ ಆಂಟ್) ಎಂದು ಗುರುತಿಸಲಾಗಿದೆ. ಈ ಕೀಟವು ಮದ್ದೂರು ತಾಲ್ಲೂಕಿನ ಕೆಲವು ಗ್ರಾಮಗಳಲ್ಲಿ ಮೊದಲ ಬಾರಿಗೆ ೧೯೮೪ ರಲ್ಲಿ ಕಂಡುಬಂದಿದ್ದು ಇತ್ತೀಚಿನ ವರದಿ ಪ್ರಕಾರ ೨೩ ಹಳ್ಳಿಗಳಲ್ಲಿ ಸುಮಾರು ೧೭೨೦ ಹೆಕ್ಟೇರ್ ಪ್ರದೇಶದಲ್ಲಿ ಈ ಕೀಟದ ಹಾವಳಿಯಿಂದ ಬೆಳೆ ನಷ್ಟವಾಗಿದಯೆಂದು ತಿಳಿದುಬಂದಿದೆ. ಈ ಕೀಟದ ಹತೋಟಿಗಾಗಿ ಕ್ಷೇತ್ರ ಪ್ರಯೋಗಗಳು ಮತ್ತು ಪ್ರಾತ್ಯಕ್ಷಿಕ ತಾಲ್ಲೂಕುಗಳನ್ನು ರೈತರ ಹೊಲಗಳಲ್ಲಿ ವಿಸ್ತರಿಸಲಾಗಿದೆ. ಜೊತೆಗೆ ವ್ಯವಸಾಯ ವಿಸ್ತರಣಾ ಸಿಬ್ಬಂದಿಯವರು ಕ್ರಮವಾಗಿ ಹಳ್ಳಿಗಳಲ್ಲಿ ರಾತ್ರಿ ಸಭೆ ನಡೆಸುವುದು, ಆಕಾಶವಾಣಿ ಮುಂತಾದ ಮಾಧ್ಯಮಗಳ ಮೂಲಕ ರೈತರಿಗೆ ಸಮಗ್ರ ಕೀಟ ನಿರ್ವಹಣೆಯ ಬಗ್ಗೆ ಸೂಕ್ತ ಸಲಹೆ ನೀಡುತ್ತಿದ್ದಾರೆ. ಹತೋಟಿ ಕೈಗೊಂಡ ಪ್ರದೇಶದಲ್ಲಿ ಕೀಟ ಬಾಧೆ ಕಡಿಮೆಯಾಗಿದೆ.